| ಓ ಎಸ್ | 48/2013 | ಪಿ.ಡಬ್ಲ್ಯೂಃ 3 |
|---|---|---|

ಇಂದು ದಿಃ 19/07/2022 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ-

ನಾನು 32 ವರ್ಷಗಳಿಂದ ದಸ್ತಾ ವೇಜು ಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಸಾಧಾರಣವಾಗಿ ನನ್ನ ಕಡೆಯಿಂದ 2 ಅಥವಾ 3 ದಾಖಲೆಗಳು ನೋಂದಣಿಯಾಗುತ್ತವೆ. ನಿ ಪಿ 10 ರಲ್ಲಿರುವ ಸೀಲ್ ಮತ್ತು ಸಹಿ ನನ್ನದಾಗಿರುತ್ತದೆ. ನಿ 10 ನ್ನು ಬರೆದುಕೊಟ್ಟ ವ್ಯಕ್ತಿ ಲೇ. ತಿಮ್ಮನಕರಿಗೌಡರ ಹೆಂಡತಿ ಮಾಕಮ್ಮ. ನಿ ಪಿ 10 ರಲ್ಲಿ ಮಾಕಮ್ಮ ನವರ ವಯಸ್ಸು ಬರೆದಿಲ್ಲ. ನನಗೆ ವೈಯಕ್ತಿಕವಾಗಿ ಮಾಕಮ್ಮ ನವರ ಪರಿಚಯವಿತ್ತು. ಅವರು ರಾಮಚಂದ್ರಪ್ಪ ನವರ ಮನೆಗೆ ಬರುತ್ತಿದ್ದರು ಹಾಗಾಗಿ ನನಗೆ ಪರಿಚಯ. ನಿ ಪಿ 10 ರ ಒಕ್ಕಣೆಯನ್ನು ಮಾಕಮ್ಮನವರೇ ಹೇಳಿ ಬರೆಸಿದ್ದರು. ನಿ ಪಿ 10 ರಲ್ಲಿ ತೋರಿಸಿದ ಸ. ನಂ. 17 ಯಾರ ಹೆಸರಿನಲ್ಲಿ ಇದೆ ಎಂಬ ಬಗ್ಗೆ ಪರಿಶೀಲನೆ ಮಾಡಿದ್ದೇನೆ. ನಿ ಪಿ 10 ನ್ನು ಬರೆದು 32 ವರ್ಷಗಳಾಗಿದ್ದು, ನಾನು ಯಾವ ಆಧಾರದಲ್ಲಿ ದಾಖಲೆ ನೋಡಿದ್ದೇನೆ ಎಂದು ಹೇಳುತ್ತಿದ್ದೇನೆಂದರೆ ಅವರು ಕೈ ಬರಹದ ಪಹಣಿಗಳನ್ನು ತಂದು ಕೊಟ್ಟಿದ್ದರು ಎಂದು ಹೇಳುತ್ತಾರೆ. 1991-1992 ರ ಸಾಲಿನ ಪಹಣಿಗಳು ಮಾಕಮ್ಮ ನವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಿ ಪಿ 10 ಕ್ಕೆ ಹುಚ್ಚಯ್ಯ ಸಿದ್ದಯ್ಯ ಎಂಬುವವರು ಸಾಕ್ಷಿಗಳಾಗಿ ಸಹಿ ಮಾಡಿದ್ದರು. ಸಾಕ್ಷಿದಾರರು ನಿ ಪಿ 10 ಅನ್ನು ನೋಡಿ ಹುಚ್ಚಯ್ಯ ಸಿದ್ದಯ್ಯ ರವರ ತಂದೆ ಹೆಸರನ್ನು ಬರೆದಿಲ್ಲ ಎಂದು ನುಡಿಯುತ್ತಾರೆ.

ನಿ ಪಿ 10 ರಲ್ಲಿ ಮಾಕಮ್ಮ ನವರ ವಯಸ್ಸು ಮತ್ತು ಆರೋಗ್ಯ ಸ್ಥಿತಿ ಬರೆಯಲು ತೊಂದರೆಯಿಲ್ಲ. ಸಾಕ್ಷಿದಾರರ ತಂದೆಯ ಹೆಸರು ಮತ್ತು ಪೂರ್ಣ ವಿಳಾಸ ಬರೆಯಲು ತೊಂದರೆಯಿತ್ತಾ ಎಂದರೆ ಮೊದಲು ತಂದೆಯ ಹೆಸರು, ಪೂರ್ಣ ವಿಳಾಸ ಬರೆಯುತ್ತಿರಲಿಲ್ಲ ಈ ಗ ಬರೆಯುತ್ತೇವೆ ಎಂದು ನುಡಿಯುತ್ತಾರೆ.

| | | |
|---|---|---|
| ಓ ಎಸ್ | 48/2013 | ಪಿ.ಡಬ್ಲ್ಯೂ 3 |

ನಾನು ಮಾಕಮ್ಮ ಹಾಗೂ ಸಾಕ್ಷಿದಾರರ ಮತದಾರರ ಗುರುತಿನ ,ಚೀಟಿಗಳನ್ನು ಪರಿಶೀಲಿಸಿರಲಿಲ್ಲ. ಮಾಕಮ್ಮ ಅನಕ್ಷರಸ್ಥರಾಗಿದ್ದು , ಆ ದಿನ ಅವರ ಜೊತೆ ಅವರ ಮನೆಯವರು ಯಾರು ಬಂದಿದ್ದರು ಎಂದು ನನಗೆ ಜ್ಞಾಪಕವಿಲ್ಲ. ನಿ ಪಿ 10 ನ್ನು ಬರೆದು 32 ವರ್ಷಗಳಾದ ಕಾರಣ ನಿ ಪಿ 10 ನ್ನು ಬರೆಯಲು ಛಾಪಾ ಕಾಗದ ಯಾರು ತಂದಿದ್ದರು ಮತ್ತು ದಾಖಲೆ ಎಷ್ಟು ಹೊತ್ತಿಗೇ ನೋಂದಣಿ ಯಾಗಿತ್ತು ಎಂದು ನನಗೆ ನೆನಪಿಲ್ಲ. ನಿ ಪಿ 10 ರಲ್ಲಿ ಆಸ್ತಿ ವಾದಿ ಮಹದೇವಮ್ಮನಿಗೆ ಸೇರಬೇಕೆಂದು ಬರೆದಿದ್ದು, ಮಹದೇವಮ್ಮನೇ ಮಾಕಮ್ಮನವರನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ವಾದಿ ನನಗೆ ಸಾಕ್ಷಿ ನುಡಿಯಲು ಹೇಳಿದ ಕಾರಣ ಅವರಿಗೆ ಅನುಕೂಲವಾಗುವಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.